# ಆಹಾ ಸುದ್ದಿ!

★ ಸಸಿತೋಟ

ಪೆನ್ಸಿಲ್ವೇನಿಯಾದ ಕೈಗಾರಿಕೆ ಅಭಿವೃದ್ಧಿ ಮಂಡಳಿಯೊಂದಕ್ಕೆ ಲ್ಯಾರಿ ಮಾರ್ಕ್‌ವುಡ್ ಎಂಬಾತನನ್ನು ನೇಮಿಸಿಕೊಂಡಿದ್ದಾರಂತೆ. ನೇಮಿಸಿಕೊಳ್ಳಲಿ ಬಿಡಿ ಎಂದು ಸರ್ಕಾರವೂ ಸುಮ್ಮನಿತ್ತು. ಆದರೆ ಈ ಲ್ಯಾರಿ ಸತ್ತು ಎರಡು ವರ್ಷಗಳಾದ ಮೇಲೆ ನೇಮಕಾತಿ ನಡೆದಿದೆಯಂತೆ. ಅಮೆರಿಕ ಭಾರತವನ್ನು ಹಿಂಬಾಲಿಸುತ್ತಿದೆ!



ಚೀನಾದಲ್ಲಿ ಹೊಸ ವರ್ಷದ ಅಂಗವಾಗಿ ಕಂಪೆನಿಯೊಂದು ಆಯೋಜಿಸಿರುವ ಸ್ಪರ್ಧೆಯಿದು. ಸ್ಪರ್ಧಾಳು ನೂರು ಯುವಾನ್ ನೋಟುಗಳನ್ನು ಬಲೆಯಲ್ಲಿ ಚಿಟ್ಟೆ ಹಿಡಿದಂತೆ ಹಿಡಿಯಬೇಕು. ಯಾರು ಎಷ್ಟು ಬಾಚಿಕೊಳ್ಳುತ್ತಾರೋ! ನಮ್ಮ ಟಿವಿ ರಿಯಲಿಟಿ ಶೋ ಆಯೋಜಕರಿಗೆ ಹೊಸ ಐಡಿಯಾ.



ವೆನೆಜುವೆಲಾದಲ್ಲಿ ನಡೆದ ಹಚ್ಚೆ ಕಲೆ ಮತ್ತು ದೇಹದ ಅಂಗಾಂಗಗಳ ಮಾರ್ಪಾಡು ಪ್ರದರ್ಶನದಲ್ಲಿ ಹವಾಯಿಯ ಕಾಲಾ ಕೈವಿ ಎಂಬಾತ ತನ್ನ ಸೌಂದರ್ಯವನ್ನು ಪ್ರದರ್ಶಿಸಿದ. ಯಾವುದೇ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳದೆ ಕಿವಿಯ ಹಾಲೆಯ ವ್ಯಾಸವನ್ನು 4.3 ಇಂಚಿನಷ್ಟು ಹಿಗ್ಗಿಸಿಕೊಂಡಿದ್ದಾನೆ. ಇದು ಗಿನ್ನೆಸ್ ದಾಖಲೆಯಂತೆ. ದೇಹದ ಮಾರ್ಪಾಡು ಎನ್ನುವುದಕ್ಕಿಂತ ರಕ್ಕಸ ಸೌಂದರ್ಯ ಪ್ರದರ್ಶನ ಎಂದು ಹೆಸರನ್ನೇ ಮಾರ್ಪಾಡು ಮಾಡುವುದು ಒಳಿತು.



ಇಂಗ್ಲೆಂಡ್ ನಿವಾಸಿ ಪರೇಶ್ ಹಿಂಡೋಚಾ ಕಳೆದ 38 ವರ್ಷಗಳಿಂದ ತನ್ನ ಮೀಸೆಯ ಆರೈಕೆ ಮಾಡುತ್ತಿದ್ದಾನಂತೆ. ಪ್ರತಿ ದಿನ ಬೆಳಿಗ್ಗೆ ಎದ್ದ ಕೂಡಲೇ ಅರ್ಧ ತಾಸು ಮೀಸೆಯ ಅಲಂಕಾರಕ್ಕೆ ಮೀಸಲು. ಹೇರ್ ಡ್ರೈಯರ್, ಹೇರ್ ಸ್ಪ್ರೇ, ಸ್ಟೈಲಿಂಗ್ ಕ್ರೀಂ ಎಲ್ಲವನ್ನೂ ಬಳಸಿ ಹುರಿಗೊಳಿಸುತ್ತಾನಂತೆ. 56 ವರ್ಷ ವಯಸ್ಸಿನ ಈ ಮೀಸೆ ಮಾವ 18ಕ್ಕೆ ಬಂದ ಮೀಸೆಯನ್ನು ಹೇರ್ ಡೈನಿಂದ ಮಾತ್ರ ದೂರವಿಟ್ಟದ್ದು ಏಕೋ?



ರೊಮಾನಿಯಾದಲ್ಲಿರುವ ಮಂಜುಗಡ್ಡೆಯಲ್ಲಿ ಕೊರೆದ ಹೋಟೆಲ್‌ನ ಕೊಠಡಿಯಿದು. ಮೈನಸ್ 2 ಡಿಗ್ರಿ ಕೊರೆಯುವ ಚಳಿಯಲ್ಲಿ ಬೆಚ್ಚನೆಯ ಹೊದಿಕೆ ಹೊಂದಿಸಿ ಕೊಡುತ್ತಾರಂತೆ. ಉಷ್ಣಾಂಶ ಅಷ್ಟೇ ಇದ್ದರೆ ಸರಿ, ಸ್ವಲ್ಪ ಹೆಚ್ಚಾದರೂ ಮಂಜಿನ ಜೊತೆ ಮಳೆಯ ಮೋಜನ್ನೂ ಕೊಠಡಿಯೊಳಗೇ ಅನುಭವಿಸಬಹುದು.

ನ್ಯೂಪೋರ್ಟ್‌ನ ಪೀಟರ್ ರೋಫ್ 26 ಮಕ್ಕಳ ತಂದೆ. ಐದು ಕೊಠಡಿಗಳ ಉಚಿತ ಮನೆ, ವರ್ಷಕ್ಕೆ 46 ಸಾವಿರ ಪೌಂಡ್ ನೆರವು... ಎಲ್ಲವನ್ನೂ ಸರ್ಕಾರ ನೀಡುತ್ತಿದೆಯಂತೆ. ಆದರೂ ಈ ಮನೆ ಸೆರೆಮನೆಯಂತೆ ಅನಿಸುತ್ತಿದೆ, ಇನ್ನೂ ದೊಡ್ಡ ಮನೆ ಬೇಕು ಎಂದು ಸ್ಥಳೀಯ ಕೋರ್ಟ್ ಮೊರೆ ಹೋಗಿದ್ದಾನಂತೆ. ಅದೃಷ್ಟ ಎಂದರೆ ಪೀಟರ್‌ನದು ಎಂದು ಸ್ಥಳೀಯರು ಮಾತನಾಡಿಕೊಳ್ಳುತ್ತಿದ್ದಾರಂತೆ. ಅದೃಷ್ಟ ತಂದಿದ್ದು ಮಕ್ಕಳೋ ಅಥವಾ ಮನೆಯೋ!